ಪದಬಂಧ



**ಎಡದಿಂದ ಬಲಕ್ಕೆ**

1. ಅಧೋಗತಿಯಲ್ಲಿ ಇದ್ದವರನ್ನೆಲ್ಲ ಮೇಲೆತ್ತಿದವ ಆ ರಾಜ್ಯದ ಅರಸ 4
3. ನೀವು ಆರಿಸಿರುವ ಪ್ರದೇಶದಲ್ಲಿ ಕಿಂಚಿತ್ತೂ ಸದ್ದು ಗದ್ದಲಗಳಿಲ್ಲ 3
4. ಮೈಸೂರು ನೋಡಿ ಬರಲು ಈಗ ಎಲ್ಲೆಲ್ಲೂ ಶುಲ್ಕ ನೀಡಬೇಕೇ? 3
6. ನಿದ್ರಾಕಾರ್ಯದ ಅವಧಿಯನ್ನು ತೀರ್ಮಾನಿಸುವವ ಯಾರು? 4
7. ಕೆಲಸದ ಬಗೆಗೇ ಆತನಿಗೆ ಚಿಂತೆ ಯಾವಾಗಲೂ 4
8. ನೋಡಿದೊಡನೆ ಸುಮ್ಮನಾಗುವವನನ್ನು ಕಂಡರೇ ಮಂದಹಾಸ 4
10. ಕವಿಯ ನೋವನ್ನು ಬಣ್ಣಿಸಲೊಂದು 'ಹೊಸಕಾಲದ ಪದ್ಯ' 4
12. ಈ ಪರಿಯ ಕಾರ್ಯಕ್ಕೆ ಸೂಕ್ತವಾದ ಸಾಧನ ಇದೆಯೇ? 4
14. ಅಕ್ಕನ ಮನೆ ಕಾಯಲು ಬಂದವ ಭಾರೀ ಮುಗ್ಧ 4
16. ನರಳಿಸುವವರ ಕೈಗೆ ಸಿಗದೆ ಹೊರಕ್ಕೆ ಜಾರಿಕೋ 3
17. ವೀರರ ಹಾದಿಯನ್ನೇ ಅನುಸರಿಸಿ ವಿನೋದದ ಸಂಚಾರ 3
18. ಕುಟ್ಟಿ ಕುಟ್ಟಿ ತಲೆ ಎತ್ತದಂತೆ ಮಾಡಿದ್ದು ಎಂಥ ಮೋಸ, ವಂಚನೆ! 4

**ಮೇಲಿನಿಂದ ಕೆಳಕ್ಕೆ**

1. ಅಮ್ಮನಿಗೆ ಹೋಲಿಕೆಯೆಂದರೆ ಈ ಭೂಮಿ ಮಾತ್ರ 3
2. ಕತ್ತಿ ತಿರುವಿ ನಿಂತವನು ಒಬ್ಬ ಅಲೆಮಾರಿ 3
3. ಇಷ್ಟೂ ಕಾಳನ್ನು ಒಯ್ಯಲು ತಕ್ಕಂತಿದೆ ಅವನ ಎತ್ತರದ ಶರೀರ 4
5. ಇನ್ನೂ ಸುಮ್ಮನಿಲ್ಲದಿದ್ದರೆ ಬಂದೀತು ಕೋಪ 3
7. ಆಕೆಯ ಮಂದಹಾಸವನ್ನು ಕಂಡ ನಂತರವಷ್ಟೇ ನೆಮ್ಮದಿ ಬಂತು 4
9. ಗತಿ ಇಲ್ಲದವರನ್ನು ಕಾಪಾಡುವ ಹೊಣೆ ಬಹಳ ಹೆಚ್ಚಿನ ತರಹದ್ದು 4
11. ಕಾನನವನ್ನು ರಕ್ಷಿಸಲೆಂದು ವಿಶೇಷ ಶಾಸನ ಬದ್ಧ ನಿಯಮ 3
13. ಸರ ಧರಿಸಿ ಸರಿದಾಡಲು ತಕ್ಕದ್ದು ಈ ತಪ್ಪಿಲ್ಲದ ಹಾದಿ 4
14. ಆಳುಕಾಳು ಇರಿಸಿಕೊಳ್ಳಲು ಭಾರೀ ಭಯ, ಹಿಂಜರಿತ 3
15. ವಿತ್ತಕ್ಕಾಗಿಯೇ ಬರೆದದ್ದು ಈ ಸುಂದರ ಪದ್ಯ 3

---

**19–10–2023 ಉತ್ತರಗಳು**

**ಎಡದಿಂದ ಬಲಕ್ಕೆ**

1. ಸಹೋದರ 3. ಗೋದಾಮು 4. ಸಾರಂಗಿ 6. ಕಾಲಭಯ 7. ಹವಣಿಸು 9. ನರೋತ್ತಮ 12. ಆಮೆವೇಗ 14. ನರಕ 15. ಭಾವನೆ 16. ರಣರಂಗ

**ಮೇಲಿನಿಂದ ಕೆಳಕ್ಕೆ**

1. ಸಮುದಾಯ 2. ರಸಾರುಹ 3. ಗೋಪಾಲ 5. ಗಿರಣಿ 6. ಕಾರಕೂನ 8. ಸುರಸಂಗ 10. ರೋದನ 11. ಮಧುಕರ 12. ಆಸ್ತಿಭಾಗ 13. ವೇದನೆ

ಪ್ರಶ್ನಾಂಕಣ

# ಚಂದ್ರನ ನೆಲದಲ್ಲೂ ಇದೆಯೇ ಕಸ?

ವಿಶ್ವದಲ್ಲಿ ಧರೆಯ ಅತ್ಯಂತ ನಿಕಟ ಸಂಗಾತಿಯಾಗಿರುವ ಚಂದ್ರ ನಮ್ಮಿಂದ ಸಮೀಪ ನಾಲ್ಕು ಲಕ್ಷ ಕಿಲೋಮೀಟರ್ ದೂರದಲ್ಲಿದೆ. ಹಾಗಿದ್ದೂ, ಚಂದ್ರನಲ್ಲೂ ಮನುಷ್ಯ ಮೂಲದ ಕಸ ಬೇಕಾದಷ್ಟಿದೆ; ಸಾವಿರಾರು ಟನ್‌ಗಳ ಲೆಕ್ಕದಲ್ಲಿ ಸಂಗ್ರಹವಾಗಿದೆ; ಅಲ್ಲಲ್ಲಿ ಹರಡಿ ಬಿದ್ದಿದೆ. ಆದರೆ ವಿಶೇಷ ಏನೆಂದರೆ, ಚಂದ್ರನಲ್ಲಿರುವ ಕಸ ಯಾವುದೂ ಭೂಮಿಯಲ್ಲಾಗುವಂತೆ ಕೊಳೆಯುವುದಿಲ್ಲ, ದುರ್ನಾತ ಬೀರುವುದಿಲ್ಲ; ಎಷ್ಟೇ ಕಾಲಕ್ಕೂ ಕುಗ್ಗುವುದೂ ಇಲ್ಲ, ಕಣ್ಮರೆ ಆಗುವುದೂ ಇಲ್ಲ.

ಏಕೆಂದರೆ, ಮೊದಲಿಗೆ ಚಂದ್ರನಲ್ಲಿ ಗಾಳಿ ಇಲ್ಲ; ತೇವಾಂಶದಿಂದ ಕೂಡಿದ ಪರಿಸರ ಇಲ್ಲ; ವಸ್ತುಗಳನ್ನು ಕೊಳೆಸಬಲ್ಲ ಸೂಕ್ಷ್ಮ ಜೀವಿಗಳೂ ಇಲ್ಲ. ಜೊತೆಗೆ ಚಂದ್ರನ ಮೇಲೆ ಬಿದ್ದಿರುವುದೆಲ್ಲ ಪ್ರಮುಖವಾಗಿ ಚಂದ್ರನ ನೆಲದ, ಪರಿಸರದ, ಅಂತರಾಳದ ಅಧ್ಯಯನಕ್ಕೆಂದು ಕಳುಹಿಸಲಾದ ವ್ಯೋಮ ನೌಕೆಗಳ ಮತ್ತು ವೈಜ್ಞಾನಿಕ ಸಾಧನಗಳ ಭಗ್ನ ಅಥವಾ ನಿಷ್ಕ್ರಿಯ ಅವಶೇಷಗಳು ಅಷ್ಟೆ.

ನಿಮಗೇ ತಿಳಿದಂತೆ ಚಂದ್ರ ಶೋಧವನ್ನು ಹಲವಾರು ರಾಷ್ಟ್ರಗಳ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಗಳು ಸುಮಾರು ಆರು ದಶಕಗಳ ಕಾಲದಿಂದ ನಡೆಸುತ್ತ ಬಂದಿವೆ: ಅಮೆರಿಕ, ಭಾರತ, ರಷ್ಯಾ, ಚೀನಾ, ಜಪಾನ್, ದಕ್ಷಿಣ ಕೊರಿಯಾ, ಇಟಲಿ ಇತ್ಯಾದಿ. ಈ ಎಲ್ಲ ರಾಷ್ಟ್ರಗಳೂ ಕಳುಹಿರುವ ವಾಹನಸಾಧನಗಳ ಅವಶೇಷಗಳು ಚಂದ್ರನಲ್ಲಿ ಕಸವಾಗಿ ಹರಡಿವೆ. ಅಷ್ಟೂ ಕಸದಲ್ಲಿ ಅಮೆರಿಕದ ನಾಸಾ ಸಂಸ್ಥೆಯದೇ ಅಗ್ರಪಾಲು. ಏಕೆಂದರೆ ಮಾನವ ಪದಾರ್ಪಣವೂ ಸೇರಿದಂತೆ ಈ ಸಂಸ್ಥೆಯ ಕಾರ್ಯಕ್ರಮಗಳೇ ಅತ್ಯಧಿಕ.

ನಾಸಾ ಸಂಸ್ಥೆಯ ಸುಪ್ರಸಿದ್ಧ ಅಪೋಲೊ ಕಾರ್ಯಕ್ರಮವನ್ನು ಹೊರತುಪಡಿಸಿ 1972ರಿಂದ 2012ರವರೆಗಿನ 50 ವರ್ಷಗಳಲ್ಲಿ ಚಂದ್ರನಲ್ಲಿ ಕಸವಾಗಿ ಉಳಿದಿರುವ ನಿರ್ಮಿತಿಗಳ ಪಟ್ಟಿ ಹೀಗಿದೆ: ರೇಂಜರ್‌ಗಳು 05, ಸರ್ವೇಯರ್‌ಗಳು 07, ಎಕ್ಸ್‌ಪ್ಲೋರರ್‌ಗಳು 02, ಆರ್ಬಿಟರ್‌ಗಳು 04, ಪ್ರಾಸ್ಪೆಕ್ಟರ್‌ಗಳು 01, ಇತರೆ 03; ಒಟ್ಟು 22 ವಾಹನಸಾಧನಗಳು. ಒಂದು ವೈಜ್ಞಾನಿಕ ಅಂದಾಜಿನಂತೆ ಹಾಗೆ ಎಲ್ಲ ಮೂಲಗಳಿಂದಲೂ ಚಂದ್ರನಲ್ಲಿ ಚದುರಿ ಬಿದ್ದಿರುವ ಬಿಸಾಕು ವಸ್ತುಗಳ ಒಟ್ಟು ತೂಕ (ಭೂಮಿಯ ಮೇಲೆ) ಸುಮಾರು ಎರಡೂವರೆ ಲಕ್ಷ ಕಿಲೋಗ್ರಾಂ ಆಗುವಷ್ಟಿದೆ!



ವಿಸ್ಮಯ ಏನೆಂದರೆ, ಚಂದ್ರನಲ್ಲಿರುವ ಕಸದ ಪ್ರತಿ ಚೂರು ಕೂಡ ಭವಿಷ್ಯದಲ್ಲಿ ಅಲ್ಲಿಂದ ಭೂಮಿಗೆ ವಾಪಸ್ಸು ತರುವಂತಾದಾಗ ಅಮೂಲ್ಯ ವಸ್ತು ಆಗಲಿದೆ; ಭಾರೀ ಮೌಲ್ಯಗಳನ್ನು ನೀಡಿ ಅವನ್ನು ಕೊಂಡು ಪ್ರದರ್ಶಿಸಲು ಮ್ಯೂಸಿಯಂಗಳು ಮತ್ತು ಅಪೂರ್ವ ವಸ್ತು ಸಂಗ್ರಾಹಕರು ಕಾದು ನಿಂತಿರುವುದು ನಿಸ್ಸಂಶಯ!

■ ಎನ್‌. ವಾಸುದೇವ್